Original Article
ISSN (Online): 2582-7472

ShodhKosh: Journal of Visual and Performing Arts
April 2024 5(4), 1890–1892

# ANALYSIS OF SHIVARAMA KARANTHARA'S NOVEL "RETURN TO THE SOIL"

# ಶಿವರಾಮ ಕಾರಂತರ ಮರಳಿ ಮಣ್ಣಿಗೆ ಕಾದಂಬರಿಯ ವಿಶ್ಲೇಷಣೆ

Bharati Sangappa Gaddi [1]

[1] Associate Professor Kannada Dept, KLE S S M S College, Athani

DOI
10.29121/shodhkosh.v5.i4.2024.5617

**Funding:** This research received no specific grant from any funding agency in the public, commercial, or not-for-profit sectors.

**Copyright:** © 2024 The Author(s). This work is licensed under a Creative Commons Attribution 4.0 International License.

With the license CC-BY, authors retain the copyright, allowing anyone to download, reuse, re-print, modify, distribute, and/or copy their contribution. The work must be properly attributed to its author.

## ABSTRACT

**English:** Karanthara, who enriched the Kannada literary world, was involved in many fields such as writing.. Yakshagana.. Political thought.. etc. In his writing, the novel "Return to the Soil" is a great one, expressing a message of social concern along with environmental love. The novel is a story that is woven in the regional languages of Kodi, Padumunnur, Mandarthi, and Manur of the coastal areas. The roar of the sea.. the gentle breeze.. the green fields spread out in the vast plains.. the aral.. the heavy rain.. the wind.. the seashore.. the lake.. the garden.. the field.. the grove.. the grove.. all these unfold and spread before our eyes in Karantha's words.

**Hindi:** ಕನ್ನಡ ಸಾಹಿತ್ಯ ಲೋಕವನ್ನು ಮತ್ತಷ್ಟು ಶ್ರೀಮಂತವನ್ನಾಗಿಸಿದ ಕಾರಂತರು ಬರವಣಿಗೆ.. ಯಕ್ಷಗಾನ.. ರಾಜಕೀಯ ಚಿಂತನೆ.. ಹಾಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತಮ್ಮ ಬರವಣಿಗೆಯಲ್ಲಿ ಪರಿಸರ ಪ್ರೇಮದ ಜೊತೆಗೆ ಸಾಮಾಜಿಕ ಕಳಕಳಿ ಸಂದೇಶ ವ್ಯಕ್ತಪಡಿಸಿದ "ಮರಳಿ ಮಣ್ಣಿಗೆ" ಕಾದಂಬರಿ ಮಹತ್ತರವಾದುದು. ಕಾದಂಬರಿ ಕರಾವಳಿ ಪ್ರದೇಶಗಳ ಕೋಡಿ, ಪಡುಮುನ್ನೂರು, ಮಂದರ್ತಿ, ಮಣೂರುಗಳ ಪ್ರಾದೇಶಿಕ ಭಾಷೆಯಲ್ಲಿ ಎಳೆಎಳೆಯಾಗಿ ಬಿಡಿಸಿ ಹರವಿದ ಕಥೆ. ಕಡಲ ಅಬ್ಬರ.. ತೆಂಕುಗಾಳಿ.. ವಿಶಾಲ ಬಯಲಲ್ಲಿ ಮೈಚಾಚಿದ ಹಸಿರ ಹೊಲಗಳು.. ಅರಾಲು.. ಜಡಿಮಳೆ.. ಬೀಸುಗಾಳಿ.. ಕಡಲದಂಡೆ.. ಅಳುವೆ.. ಕೆರೆ.. ತೋಟ.. ಗದ್ದೆ.. ಅಗೇಡಿ.. ಹನೆಮರ.. ಇವೆಲ್ಲವೂ ಕಾರಂತರ ಮಾತಿನಲ್ಲಿ ಸುರುಳಿ ಬಿಚ್ಚಿ ಕಣ್ಮುಂದೆ ಹರಡಿ ಬಿಡುತ್ತವೆ.

OPEN ACCESS

ಕನ್ನಡ ಸಾಹಿತ್ಯ ಲೋಕವನ್ನು ಮತ್ತಷ್ಟು ಶ್ರೀಮಂತವನ್ನಾಗಿಸಿದ ಕಾರಂತರು ಬರವಣಿಗೆ.. ಯಕ್ಷಗಾನ.. ರಾಜಕೀಯ ಚಿಂತನೆ.. ಹಾಗೆ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ತಮ್ಮ ಬರವಣಿಗೆಯಲ್ಲಿ ಪರಿಸರ ಪ್ರೇಮದ ಜೊತೆಗೆ ಸಾಮಾಜಿಕ ಕಳಕಳಿ ಸಂದೇಶ ವ್ಯಕ್ತಪಡಿಸಿದ "ಮರಳಿ ಮಣ್ಣಿಗೆ" ಕಾದಂಬರಿ ಮಹತ್ತರವಾದುದು. ಕಾದಂಬರಿ ಕರಾವಳಿ ಪ್ರದೇಶಗಳ ಕೋಡಿ, ಪಡುಮುನ್ನೂರು, ಮಂದರ್ತಿ, ಮಣೂರುಗಳ ಪ್ರಾದೇಶಿಕ ಭಾಷೆಯಲ್ಲಿ ಎಳೆಎಳೆಯಾಗಿ ಬಿಡಿಸಿ ಹರವಿದ ಕಥೆ.

ಕಡಲ ಅಬ್ಬರ.. ತೆಂಕುಗಾಳಿ.. ವಿಶಾಲ ಬಯಲಲ್ಲಿ ಮೈಚಾಚಿದ ಹಸಿರ ಹೊಲಗಳು.. ಅರಾಲು.. ಜಡಿಮಳೆ.. ಬೀಸುಗಾಳಿ.. ಕಡಲದಂಡೆ.. ಅಳುವೆ.. ಕೆರೆ.. ತೋಟ.. ಗದ್ದೆ.. ಅಗೇಡಿ.. ಹನೆಮರ.. ಇವೆಲ್ಲವೂ ಕಾರಂತರ ಮಾತಿನಲ್ಲಿ ಸುರುಳಿ ಬಿಚ್ಚಿ ಕಣ್ಮುಂದೆ ಹರಡಿ ಬಿಡುತ್ತವೆ.

ಐತಾಳ ವಂಶದ ರಾಮ ಐತಾಳರಿಂದ ಹಿಡಿದು ಮೊಮ್ಮಗ ರಾಮನವರೆಗೂ ಮೂರು ತಲೆಮಾರುಗಳಲ್ಲಿ ಒಂದು ಕುಟುಂಬದ ಸ್ಥಿತಿಗತಿಗಳನ್ನು, ಅನುಭವಿಸುವ ಬದುಕಿನ ಅಸದೃಶ ತಿರುವುಗಳಲ್ಲಿ ಬದುಕು ಚಲನಶೀಲವೆಂಬುದಕ್ಕೆ ಉದಾಹರಣೆಯಂತೆ ಬಾಳ್ವೆ ನಡೆಸಿದ ಜೀವಗಳ ಆಸೆಗಳು, ತರ್ಕಗಳು.. ಅದಕ್ಕಾಗಿ ಪಡುವ ತಾಕಲಾಟಗಳು... ಪಡೆದದ್ದಕ್ಕಿಂತ ಕಳೆದುಕೊಂಡದ್ದೇ ಹೆಚ್ಚಾಗಿ ಅನುಭವಿಸುವ ರೋಧನೆಯನ್ನು ಮೆಟ್ಟಿನಿಲ್ಲುವ ಈ

**How to cite this article (APA):** Gaddi, B. S. (2024). Analysis of Shivarama Karanthara's Novel "Return To The Soil". *ShodhKosh: Journal of Visual and Performing Arts, 5*(4), 1890–1892. doi: 10.29121/shodhkosh.v5.i4.2024.5617

ಹೆಣ್ಣುಮಕ್ಕಳ ಆತ್ಮಸ್ಥೈರ್ಯ ನಿಜಕ್ಕೂ ಮೆಚ್ಚುವಂತದ್ದು. ಸ್ವಾತಂತ್ರ್ಯಪೂರ್ವದ ಕಥೆಯಾಗಿದ್ದರೂ ಕಾಲದ ಗೊಡವೆ ಅಡ್ಡಬರದಂತೆ ಓದಿಸಿಕೊಂಡು ಹೋಗಿ ನನ್ನ ಮನದಲ್ಲಿ ವಿಭಿನ್ನವಾದ ಸ್ಥಾನಪಡೆದುಕೊಂಡಿತು. "ಮರಳಿಮಣ್ಣಿಗೆ" ಶೀರ್ಷಿಕೆಯೇ ಸತ್ಯ.

ಬಡತನದ ಬಾಳ್ವೆಯ... ನಲಿವಿಗಿಂತ ನೋವಿನ ಕಥಾವಸ್ತುವಾದ ಮರಳಿಮಣ್ಣಿಗೆ ಕಾದಂಬರಿ ಕನ್ನಡ ಸಾಹಿತ್ಯಲೋಕಕ್ಕೆ ಮೆರುಗನ್ನು ನೀಡಿದೆ. ಕೆಲವೊಮ್ಮೆ ಅಳಿಸುವ, ಹಲವೊಮ್ಮೆ ಅಚ್ಚರಿಗೊಳಿಸುವ, ಮತ್ತೊಮ್ಮೆ ಗಾಢಮೌನಕ್ಕೆ ತಳ್ಳುತ್ತ ಸಾಗುವ ಕಥೆಯಲ್ಲಿ ಪಾರೋತಿ, ಸರಸೋತಿ, ನಾಗವೇಣಿಯರು ಒಬ್ಬರಿಗಿಂತ ಒಬ್ಬರು ಗಟ್ಟಿಗಿತ್ತಿಯರು. ಅಬ್ಬಾ...! ಎನಿಸುವ ಮಟ್ಟಿಗೆ ಧೈರ್ಯ ತೋರಿ ಬದುಕನ್ನು ಈಸಲು ಹೋರಾಡಿದವರು. ಪಾರೋತಿಗಿಂತ ಸರಸೋತಿ ಹೆಚ್ಚೆಂದುಕೊಂಡರೆ ಕಥೆಯ ಮಧ್ಯಭಾಗದಿಂದ ಬರುವ ನಾಗವೇಣಿ ಇಬ್ಬರನ್ನೂ ಮೀರಿಸಿ ನಿಂತು ಬಿಡುತ್ತಾಳೆ. ಮನೆಯ ಸಮೀಪದ ಕಡಲು ನಾಗವೇಣಿಯ ದುಃಖ, ನಿರಾಶೆ, ನೋವು. ಹತಾಷೆಗಳಿಗೆ ಸಾಕ್ಷಿಯಾಗಿ ನಿಂತು ಅವಳ ಮಡುಗಟ್ಟಿದ ಮೂಕವೇದನೆ ಕಡಲಲ್ಲಿ ಕರಗಿ ಕೊಚ್ಚಿ ಹೋಗಬಾರದೇ ಎಂದು ವ್ಯಥೆಪಡುವಷ್ಟರ ಮಟ್ಟಿಗೆ ನೊಂದುಬಿಡುತ್ತಾಳೆ.

'ಮರಳಿ ಮಣ್ಣಿಗೆ' ಶಿವರಾಮ ಕಾರಂತರ ಕಾದಂಬರಿ. ಆಂಗ್ಲ ಕಾದಂಬರಿಕಾರ್ತಿ ಪರ್ಲ್ ಬಕ್ ಎಂಬಾಕೆಯ 'ಗುಡ್ ಅರ್ಥ್' ಕಾದಂಬರಿ ಓದಿ ಪ್ರೇರಿತರಾಗಿ ಕಾರಂತರು ಈ ಕಾದಂಬರಿ ರಚಿಸಿದ್ದಾರೆ. ಮೂರು ತಲೆಮಾರುಗಳ ಕಥಾನಕವನ್ನುಹೊಂದಿದೆ. ಈ ಮಧ್ಯೆ ಕಂಡು ಬರುವ ಆರ್ಥಿಕ ಸಾಮಾಜಿಕ ಬದಲಾವಣೆಯ ಸ್ವರೂಪವೇ ಕಾದಂಬರಿಯ ಮೂಲ ವಸ್ತು.

ರಾಷ್ಟ್ರೀಯ ಚಳವಳಿಯ ಕಾವು ಕತೆಯ ಮೂರನೇ ತಲೆಮಾರಿನ ಚಿತ್ರಣದಲ್ಲಿ ಕಾಣಿಸಿಕೊಂಡಿದೆ ಅಲ್ಲದೆ, ಈ ಚಳವಳದಲ್ಲಿ ಪಾಲುಗೊಂಡಿದ್ದ ಕಾರಂತರು ತಾವೇ ಒಂದು ಪ್ರಮುಖ ಪಾತ್ರವಾಗಿ ಕಾಣಿಸಿಕೊಂಡಿದ್ದಾರೆ. ಬಡತನ, ಕೌಟುಂಬಿಕ ಸಂಕಟಗಳ ನಡುವೆಯೂ ಜೀವನದ ಇತ್ಯಾತ್ಮಕ ಮೌಲ್ಯಗಳನ್ನೇ ಬಾಳಿನ ಸಾರ್ಥಕತೆಯ ಸಾರಸರ್ವಸ್ವವೆಂದು ನಂಬಿ ಬಾಳಿದ ಮನುಷ್ಯ ಜೀವಿಗಳ ಹೋರಾಟ, ಆಧುನಿಕ ಜೀವನದ ಶೋಕಿಗೆ ಮರುಳಾಗಿ ಅನೈತಿಕ ನಡತೆಗಳಿಂದ ಬದುಕನ್ನು ಸಾಗಿಸಿ, ಬಿರುಗಾಳಿಗೆ ಸಿಲುಕಿದ ಹಡಗಿನಂತೆ - ಹೊಯ್ದಾಟದ ದುರಂತ ಜೀವನಕ್ಕೆ ತುತ್ತಾದ ವ್ಯಕ್ತಿಗಳ ಕತೆ, ರಾಷ್ಟ್ರೀಯ ಚಳವಳಿಯ ಅಲೆಯಲ್ಲಿ ಎಲ್ಲೆಲ್ಲೋ ಕೊಚ್ಚಿಕೊಂಡು ಹೋಗಿ, ಗುರಿಸಾಧಿಸಲು ವಿಫಲನಾಗಿ, ಕೊನೆಗೂ ಹುಟ್ಟಿದ ನೆಲಕ್ಕೆ ಮರಳಿಬಂದು, ದುಡಿದು ಜೀವಿಸಲು ನಿರ್ಧರಿಸಿದ ಕಥಾನಾಯಕ ರಾಮನ ಕಥೆಯೆ ಈ ಕಾದಂಬರಿ.

ದಕ್ಷಿಣ ಕನ್ನಡ ಜಿಲ್ಲೆಯ ಪಡು ಕರಾವಳಿಯಲ್ಲಿರುವ ಕೋಡಿ ಎಂಬ ಹಳ್ಳಿಯೇ ಕಾದಂಬರಿಯ ಕೇಂದ್ರ. ರಾಮೈತಾಳರಿಗೆ ಪಾರೋತಿ ಹಾಗೂ ಸತ್ಯಭಾಮೆ-ಇಬ್ಬರು ಪತ್ನಿಯರು. ಅಕ್ಕ ಸರಸೋತಿ ವಿಧವೆ. ಸತ್ಯಭಾಮೆಗೆ ಲಚ್ಚ ಮತ್ತು ಸುಬ್ಬಿ-ಮಕ್ಕಳು. ಬಡತನದ ಮಧ್ಯೆ ಸಂಸಾರ ಸಾಗುತ್ತದೆ. ಇಂಗ್ಲಿಷ್ ವಿದ್ಯಾಭ್ಯಾಸ ಕಲಿತಿದ್ದರೂ ಮಗ ಲಚ್ಚ ದುರ್ವ್ಯಸನಿ. ರಾಮೈತಾಳರು ಸೊಸೆಯ (ನಾಗವೇಣಿ) ಹೆಸರಿಗೆ ಆಸ್ತಿ ಬರೆದು ಸಾಯುತ್ತಾರೆ. ಇದನ್ನು ಸಹಿಸದ ಮಗ ಲಚ್ಚ, ಆಸ್ತಿಯನ್ನು ಸವೆಸಿ, ಹೆಂಡತಿ ಮಕ್ಕಳನ್ನು ಅಬ್ಬೇಪಾರಿ ಮಾಡುತ್ತಾನೆ. ಸೊಸೆ ನಾಗವೇಣಿ ಸಹನೆಯಿಂದ ಎಲ್ಲ ಕಷ್ಟ ಸಹಿಸುತ್ತಾಳೆ. ನಾಗವೇಣಿಯ ಮಗ ರಾಮ, ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುತ್ತಾನೆ. ವಿದ್ಯಾಭ್ಯಾಸ ಮೊಟಕುಗೊಳ್ಳುತ್ತದೆ. ನಿರುದ್ಯೋಗಿಯಾಗಿದ್ದ ರಾಮನ ಕಂಡು ನಾಗವೇಣಿ ಬೇಸರಿಸಿಕೊಳ್ಳುತ್ತಾಳೆ. ಮುಂಬೈಯಲ್ಲಿದ್ದು, ತಾನು ಕಲಿತಿದ್ದ ಅಲ್ಪಸ್ವಲ್ಪ ಸಂಗೀತ ಪಾಠ ಹೇಳಿಕೊಂಡು ರಾಮ ಜೀವನ ಸಾಗಿಸುತ್ತಾನೆ. ಈ ಮಧ್ಯೆ ತಾಯಿ ನಾಗವೇಣಿಯ ಪತ್ರ ಬಂದು, ರಾಮೈತಾಳರು (ಅಜ್ಜ) ಗೋಡೆಯಲ್ಲಿ ಇರಿಸಿದ್ದ ನಿಧಿಯ ಕುರಿತು ಬರೆದಿರುವ ವಿಷಯ ಕಂಡು ಆತ ಊರಿಗೆ ಮರಳುತ್ತಾನೆ. ತಾಯಿಯೊಂದಿಗೆ ಸಹಕರಿಸುತ್ತಾನೆ ಎಂಬುದು ಕಾದಂಬರಿಯ ವಸ್ತು.

'ಮರಳಿ ಮಣ್ಣಿಗೆ' ಕಾದಂಬರಿಯ ವಸ್ತು ವಿಷಯಗಳು ಮುಖ್ಯವಾಗಿ ಮೂರು ತಲೆಮಾರುಗಳ ಕಥೆ, ಸಾಂಪ್ರದಾಯಿಕ ಕೃಷಿಕ ಸಮಾಜದಲ್ಲಿನ ಬದಲಾವಣೆಗಳು, ಆಧುನಿಕತೆ ಮತ್ತು ಭಾರತೀಯ ಸ್ವಾತಂತ್ರ್ಯ ಚಳುವಳಿಯ ಪ್ರಭಾವವನ್ನು ಒಳಗೊಂಡಿದೆ.

ಈ ಕಾದಂಬರಿಯ ಮುಖ್ಯ ವಸ್ತುಗಳು:

**ಮೂರು ತಲೆಮಾರುಗಳ ಕಥೆ:** ಕಾದಂಬರಿಯು 1850 ರಿಂದ 1940 ರವರೆಗಿನ ಮೂರು ತಲೆಮಾರುಗಳ ಕಥೆಯನ್ನು ಹೇಳುತ್ತದೆ, ಇದು ಕುಟುಂಬದ ವಂಶಾವಳಿಯ ಮೂಲಕ ಸಮಾಜದ ಬದಲಾವಣೆಗಳನ್ನು ತೋರಿಸುತ್ತದೆ.

**ಸಾಂಪ್ರದಾಯಿಕ ಕೃಷಿಕ ಸಮಾಜದ ಚಿತ್ರಣ:** ಕಾದಂಬರಿಯು ದಕ್ಷಿಣ ಕನ್ನಡದ ಸಾಂಪ್ರದಾಯಿಕ ಕೃಷಿಕ ಸಮಾಜದ ಜೀವನ, ಆಚರಣೆಗಳು ಮತ್ತು ಮೌಲ್ಯಗಳನ್ನು ಬಿಂಬಿಸುತ್ತದೆ.

**ಆಧುನಿಕತೆಯ ಪ್ರಭಾವ:** ಕಾದಂಬರಿಯಲ್ಲಿ ಆಧುನಿಕತೆ, ಪಾಶ್ಚಿಮಾತ್ಯ ಪ್ರಭಾವಗಳು, ಮತ್ತು ವಿದ್ಯಾಭ್ಯಾಸವು ಸಾಂಪ್ರದಾಯಿಕ ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸುತ್ತದೆ.

**ಸ್ವಾತಂತ್ರ್ಯ ಚಳುವಳಿಯ ಪ್ರಭಾವ:** ಭಾರತೀಯ ಸ್ವಾತಂತ್ರ್ಯ ಚಳುವಳಿಯು ಸಮಾಜದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ಕಾದಂಬರಿಯಲ್ಲಿ ವಿವರಿಸಲಾಗಿದೆ.

**ಜಾತಿ ವ್ಯವಸ್ಥೆಯ ಪರಿಣಾಮಗಳು:** ಜಾತಿ ವ್ಯವಸ್ಥೆಯು ಸಮಾಜದ ಮೇಲೆ ಬೀರುವ ಪರಿಣಾಮಗಳು ಮತ್ತು ಅವುಗಳ ಪರಿಣಾಮಗಳನ್ನು ಕಾದಂಬರಿಯಲ್ಲಿ ಚರ್ಚಿಸಲಾಗಿದೆ.

**ಸ್ತ್ರೀ ಪಾತ್ರಗಳ ಮಹತ್ವ:** ಕಾದಂಬರಿಯಲ್ಲಿ ಬರುವ ಸ್ತ್ರೀ ಪಾತ್ರಗಳಾದ ಪಾರೋತಿ, ಸರಸೋತಿ, ಮತ್ತು ನಾಗವೇಣಿಯರ ಮೂಲಕ ಮಹಿಳೆಯರ ಪಾತ್ರ ಮತ್ತು ಸಮಾಜದಲ್ಲಿನ ಅವರ ಸ್ಥಾನಮಾನವನ್ನು ಎತ್ತಿ ತೋರಿಸಲಾಗಿದೆ.

**ಅದುವೇ ಬದುಕು ಸಿದ್ಧಾಂತ:** ಕಾದಂಬರಿಯಲ್ಲಿ "ಅದುವೇ ಬದುಕು" ಎಂಬ ಸಿದ್ಧಾಂತವನ್ನು ಈ ಸ್ತ್ರೀ ಪಾತ್ರಗಳ ಮೂಲಕ ವ್ಯಕ್ತಪಡಿಸಲಾಗಿದೆ.

**ಸಮಾರೋಪ :** ಒಟ್ಟಾರೆಯಾಗಿ, "ಮರಳಿ ಮಣ್ಣಿಗೆ" ಕಾದಂಬರಿಯು ಸಾಂಪ್ರದಾಯಿಕ ಕೃಷಿಕ ಸಮಾಜದಲ್ಲಿನ ಬದಲಾವಣೆಗಳು, ಆಧುನಿಕತೆಯ ಪ್ರಭಾವ, ಮತ್ತು ಸ್ವಾತಂತ್ರ್ಯ ಚಳುವಳಿಯ ಪರಿಣಾಮಗಳನ್ನು ಮೂರು ತಲೆಮಾರುಗಳ ಕಥೆಯ ಮೂಲಕ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ, ಜೊತೆಗೆ ಸ್ತ್ರೀ ಪಾತ್ರಗಳ ಮೂಲಕ ಸ್ತ್ರೀ ಸಬಲೀಕರಣದ ಮಹತ್ವವನ್ನು ಎತ್ತಿ ತೋರಿಸುತ್ತದೆ.

ಈ ಕಾದಂಬರಿಯಲ್ಲಿ ಬರುವ ಪಾತ್ರಗಳ ಮುಖೇನ ಎಲ್ಲಿಂದ ಎಲ್ಲಿಗೆ ನಡೆದರೂ... ಯಾವ ಮೂಲೆಗೆ ಹೋದರೂ... ಹುಟ್ಟಿದ ಮಣ್ಣಿನ ಘಮಲು ಬೀರುವ ಸುಗಂಧವನ್ನರಸಿ ಬರುವ ಜೀವ ಐತಾಳರ ಮೊಮ್ಮಗ ರಾಮ. ಇವನಿಂದಾಗಿಯೇ ನಾಗವೇಣಿ ಸ್ವಲ್ಪಮಟ್ಟಿಗೆ ನೆಮ್ಮದಿ ಪಡೆದದ್ದು ಸಂತಸವೇ. ಇಲ್ಲಿನ ಪ್ರತಿ ಪಾತ್ರಗಳು ಒಂದೊಂದು ರೀತಿ... ಹೆಚ್ಚು ಕಡಿಮೆ ಒಂದೇ ಮನೋಧರ್ಮವಾದರೂ ಅನುಭವಿಸುವ ತಳಮಳಗಳು ಮನಸಿನ ಏಕತಾನತೆಗಳು ಸಹಜ ಜೀವನದ ವಿವಿಧ ರೂಪಗಳಲ್ಲಿ ಬಿಂಬಿತವಾಗಿದೆ. “ಬಾಳ್ವೆಯೇ ಬೆಳಕು... ಅದುವೇ ಬದುಕು” ಎನ್ನುವ ಸಿದ್ಧಾಂತ ಈ ಕಾದಂಬರಿಯಲ್ಲಿರುವ ಪಾರೋತಿ, ಸರಸೋತಿ, ನಾಗವೇಣಿಯರ ಸ್ತ್ರೀಪಾತ್ರಗಳಿಂದ ಮನದಲ್ಲಿ ಭದ್ರವಾಗಿ ನಿಲ್ಲುತ್ತದೆ.... ಹಿಂದೆ ಓದಿದ ಬೆಟ್ಟದ ಜೀವವೂ ಕಾಡಿತ್ತು. ಈಗ ಅದರ ಸ್ಥಾನವನ್ನು ಮರಳಿಮಣ್ಣಿಗೆ ಪಡೆದಿದೆ....!

**ಪರಾಮರ್ಶನ ಗ್ರಂಥಗಳು**


1) ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲೆ, ಧಾರವಾಡ, ೨೦೦೧
2) ಗಿರಡ್ಡಿ ಗೋವಿಂದರಾಜ, ಕಾದಂಬರಿ: ವಸ್ತು ಮತ್ತು ತಂತ್ರ, ಬಾಸ್ಕೋ ಪ್ರಕಾಶನ, ಬೆಂಗಳೂರು, ೧೯೭೬
3) ದೊಡ್ಡಮೊಗೇ ಗೌಡ ಎನ್.ಎನ್., ಶಿವರಾಮ ಕಾರಂತರ ಮರಳಿ ಮಣ್ಣಿಗೆ ಒಂದು ಅಧ್ಯಯನ ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008
4) ಶಿವರಾಮ ಕಾರಂತ , ಮರಳಿ ಮಣ್ಣಿಗೆ, ಸಪ್ನ ಬುಕ್ ಹೌಸ್, ಬೆಂಗಳೂರು, 2014
5) ಸಿದ್ಧಣ್ಣ ಬಿ. ಉತ್ನಾಳ್, ಕನ್ನಡ ಕಾದಂಬರಿಗಳಲ್ಲಿ ಪ್ರಾದೇಶಿಕತೆ, ಅನುಪಮ ಪ್ರಕಾಶನ, ಅಥಣಿ, ೧೯೯೭